

# Brochure for PG Diploma in Computational Linguistics



**Sambhasha-https://sambhasha.ksu.ac.in/**







कर्नाटक–संस्कृत–विश्वविद्यालयः
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
Karnataka Samskrit University
Pampa Mahakvi Road, Chamarajpet, Bangalore-560018
Azadi Ka Amrit Mahotsav
Department of Alankarashastra
National Webinar
on
रसगङ्गाधरस्य विषयनिरूपणशैली
rasagaṅgādharasya viṣayanirūpaṇaśailī
29.08.2022, Monday | 11:00 AM
Presided by:
Prof. K. E. Devanathan
Vice-Chancellor, Karnataka Samskrit University
Resource Person:
Dr. Suresh Acharya
Retd. Principal, SMSP Sanskrit College, Udupi
Chief Guest:
Prof. V. Girish Chandra
Registrar, Karnataka Samskrit University
Platform: zoom
Coordinator:
Dr. Bheema Naik S.
HOD, Asst. Professor
Department of Alankarashastra
Co-coordinator:
Dr. Rishidev Bhargav N.
Asst. Professor
Department of Alankarashastra
Co-coordinator:
Dr. Vanaraja B K
Asst. Professor
Department of Alankarashastra

## 2022ರ ಫೆಬ್ರವರಿ 16ರಂದು ನಡೆದ ಪ್ರಶಿಕ್ಷಣ ಪರಿಷತ್ 32ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್‌ನ 32ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಫೆಬ್ರವರಿ 16, 2022ರ ಬುಧವಾರ ಬೆಳಿಗ್ಗೆ 11.30 ಗಂಟೆಗೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

ಹಾಜರಿದ್ದವರು:

| | | |
|---|---|---|
| ೧. | ಪ್ರೊ. ಕೆ.ಇ. ದೇವನಾಥನ್, ಮಾನ್ಯ ಕುಲಪತಿಗಳು, ಕ.ಸಂ.ವಿ. | ಅಧ್ಯಕ್ಷರು |
| ೨. | ಡಾ. ಶಾಂತಲಾ ವಿಶ್ವಾಸ, ಪ್ರಾಧ್ಯಾಪಕರು, ಮಂಗಳೂರು | ಸದಸ್ಯರು |
| ೩. | ವಿದ್ವಾನ್ ಎಸ್.ಎನ್. ಶಲ್ವನಾರಾಯಣ, ನಿವೃತ್ತ ಪ್ರಾಧ್ಯಾಪಕರು, ಮೇಲುಕೋಟೆ | ಸದಸ್ಯರು |
| ೪. | ಶ್ರೀ ಕೆ.ಎಸ್. ಸೂರ್ಯನಾರಾಯಣ, ಬೆಂಗಳೂರು | ಸದಸ್ಯರು |
| ೫. | ಶ್ರೀ ಶರಣ್ ಗುರ್ಜಾರ್, ಬೆಂಗಳೂರು | ಸದಸ್ಯರು |
| ೬. | ಡಾ. ಕೆ.ಎಮ್. ಮಹದೇವಯ್ಯ, ಪ್ರಾಚಾರ್ಯರು (ಪ್ರ), ಮೈಸೂರು | ಸದಸ್ಯರು |
| ೭. | ಡಾ. ಎಸ್.ಎಸ್. ನಿರಂಜನಮೂರ್ತಿ, ಪ್ರಾಚಾರ್ಯರು, ತುಮಕೂರು | ಸದಸ್ಯರು |
| ೮. | ಪ್ರೊ. ವೀರನಾರಾಯಣ ಎನ್.ಕೆ. ಪಾಂಡುರಂಗಿ, ಡೀನ್, ವೇದಾಂತ ನಿಕಾಯ, ಕ.ಸಂ.ವಿ. | ಸದಸ್ಯರು |
| ೯. | ಪ್ರೊ. ಶಿವಾನಿ ವಿ., ಡೀನ್ ಶಾಸ್ತ್ರ ನಿಕಾಯ, ಕಸಂವಿ | ಸದಸ್ಯರು |
| ೧೦. | ಪ್ರೊ. ಸಿ. ಪಾಲಯ್ಯ, ಡೀನ್, ವಿದ್ಯಾರ್ಥಿ ಕಲ್ಯಾಣ, ಕಸಂವಿ | ಸದಸ್ಯರು |
| ೧೧. | ಪ್ರೊ. ವಿ. ಗಿರೀಶ್‌ಚಂದ್ರ, ಕುಲಸಚಿವರು (ಪ್ರ) & ಡೀನ್, ಭಾಷಾನಿಕಾಯ, ಕ.ಸಂ.ವಿ. | ಸದಸ್ಯ ಕಾರ್ಯದರ್ಶಿ |

ಗೈರುಹಾಜರಿ:

| | | |
|---|---|---|
| ೧. | ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | ಪ್ರೊ. ಬಿ.ವಿ. ದೊಡಮನಿ, ಮೈಸೂರು | ಸದಸ್ಯರು |
| ೭. | ಶ್ರೀ ಶ್ರೀನಿವಾಸ ಡಿ.ಎಂ., ಮಂಗಳೂರು | ಸದಸ್ಯರು |
| ೮. | ಪ್ರೊ. ಮೇಟಿ ಮುದಿಯಪ್ಪ, ಉಡುಪಿ | ಸದಸ್ಯರು |
| ೯. | ಡಾ. ಶ್ರೀನಿಧಿ ಎಂ.ಬಿ., ಶಿವಮೊಗ್ಗ | ಸದಸ್ಯರು |
| ೧೦. | ವಿದ್ವಾನ್ ಎಚ್. ಸತ್ಯನಾರಾಯಣ ರಾವ್, ಪ್ರಾಚಾರ್ಯರು, ಬೆಂಗಳೂರು | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| ವಿಷಯ ಸಂಖ್ಯೆ 01 | 'ಸಂಶೋಧನಾ ಕೇಂದ್ರ' ಮಾನ್ಯತೆಯನ್ನು ನೀಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ. |
|---|---|
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಸಂಶೋಧನ ಕೇಂದ್ರ'ದ ಮಾನ್ಯತೆಯನ್ನು ನೀಡುವಂತೆ ರಾಜ್ಯದ ಹಲವು ಸಂಸ್ಥೆಗಳು ವಿಶ್ವವಿದ್ಯಾಲಯಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಿದ್ದವು. ಈ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಸಂಶೋಧನ ಕೇಂದ್ರದ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದಂತೆ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿತ್ತು. ಪರಿಶೀಲನಾ ಸಮಿತಿಗಳು ಸಂಸ್ಥೆಗಳಿಗೆ ಭೇಟಿ ನೀಡಿ, ಭೌತಿಕ ಪರಿಶೀಲನೆಯನ್ನು ನಡೆಸಿ ವಿಶ್ವವಿದ್ಯಾಲಯಕ್ಕೆ ವರದಿಗಳನ್ನು ಸಲ್ಲಿಸಿರುತ್ತವೆ. ಪರಿಶೀಲನಾ ಸಮಿತಿಗಳ ಶಿಫಾರಸ್ಸಿನನ್ವಯ ಈ ಕೆಳಕಂಡ ಸಂಸ್ಥೆಗಳಿಗೆ 2021–22ನೇ ಸಾಲಿನಿಂದ 'ಸಂಶೋಧನಾ ಕೇಂದ್ರ' ಮಾನ್ಯತೆಯನ್ನು ನೀಡಲಾಗಿದೆ. ಪ್ರಶಿಕ್ಷಣ ಪರಿಷತ್ತಿನ ಘಟನೋತ್ತರ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |

| | |
|---|---|
| | ಕೆಳಗಿನಂತಿದೆ.<br>1. ಪ್ರೊ. ವೀರನಾರಾಯಣ ಪಾಂಡುರಂಗಿ, ಡೀನ್, ವೇದಾಂತ ನಿಕಾಯ, ಅಧ್ಯಕ್ಷರು<br>2. ಡಾ. ಕೃಷ್ಣ ವಿ. ಜೋಷಿ, ಸಂಚಾಲಕರು, ಸಿಡಿಸಿ. ಸದಸ್ಯರು<br>3. ಡಾ. ವೆಂಕಟೇಶ ವಿ, ಸಹಾಯ ಕುಲಸಚಿವರು ಸದಸ್ಯರು<br>4. ಡಾ. ಶಕುಂತಲಾ ಭಟ್, ಯೋಜನಾ ಸಹಾಯಕರು ಸಂಚಾಲಕರು<br>ಈ ಸಮಿತಿಯು ಸದರಿ ಕಾಲೇಜಿಗೆ ಭೇಟಿ ನೀಡಿ, ತನ್ನ ಪರಿಶೀಲನಾ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದೆ. ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಈ ವಿಷಯವನ್ನು ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| ವಿಷಯ ಸಂಖ್ಯೆ 05 | 'ಪಿಎಚ್.ಡಿ.–ವಿದ್ಯಾವಾರಿಧಿ' ಅಧ್ಯಯನಕ್ಕೆ ಮಾರ್ಗದರ್ಶಕರನ್ನು ನಿಯೋಜಿಸುವ ಬಗೆಗೆ. |
| ಟಿಪ್ಪಣಿ | 'ಪಿಎಚ್.ಡಿ.–ವಿದ್ಯಾವಾರಿಧಿ' ಅಧ್ಯಯನ ಮಾಡುವ ಅಭ್ಯರ್ಥಿಗಳಿಗೆ ಮಾರ್ಗದರ್ಶಕರನ್ನಾಗಿ ನಿಯೋಜಿಸುವಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಸಂಯೋಜಿತ ಸಂಸ್ಕೃತ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರ ಆವೇದನೆಯನ್ನು ಸಲ್ಲಿಸಿರುತ್ತಾರೆ. 'ಆಂತರಿಕ ಅಧ್ಯಯನ ಮಂಡಳಿ' ಸಭೆಯ ತೀರ್ಮಾನದಂತೆ, ಯುಜಿಸಿ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನಿಯಮಾವಳಿಗಳಿಗೆ ಅನುಗುಣವಾಗಿ ಅರ್ಹ ಅಧ್ಯಾಪಕರನ್ನು 'ಪಿಎಚ್.ಡಿ.–ವಿದ್ಯಾವಾರಿಧಿ' ಅಧ್ಯಯನದ ಮಾರ್ಗದರ್ಶಕರನ್ನಾಗಿ ನಿಯೋಜಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಯುಜಿಸಿ/ವಿಶ್ವವಿದ್ಯಾಲಯದ ನಿಯಮಾವಳಿಗಳನ್ವಯ ಅರ್ಹತೆ ಹೊಂದಿರುವವರನ್ನು ಮಾರ್ಗದರ್ಶಕರನ್ನಾಗಿ ನಿಯೋಜಿಸಲು ಸಭೆಯು ಅನುಮೋದಿಸಿತು. ಮಾರ್ಗದರ್ಶಕರಾಗಲು ಅರ್ಜಿ ಸಲ್ಲಿಸಿರುವ ಇತರ ಅಧ್ಯಾಪಕರಲ್ಲಿ, ಅರ್ಹತೆ ಹೊಂದಿರುವವರನ್ನು 'ಸ್ಥಾಯಿ ಸಮಿತಿ'ಯಲ್ಲಿ ಅನುಮೋದಿಸಿ ನಿಯೋಜಿಸುವಂತೆ ತೀರ್ಮಾನಿಸಿತು. |
| ವಿಷಯ ಸಂಖ್ಯೆ 06 | **LMS (Learning Management System)** ಅಳವಡಿಸಿಕೊಂಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ. |
| ಟಿಪ್ಪಣಿ | LMS (Learning Management System) ಆಧಾರಿತ ಡಿಜಿಟಲ್ ಕಲಿಕೆಯು ವಿಷಯ ಸಂವಹನ, ಲಭ್ಯತೆ ಮತ್ತು ಮೌಲ್ಯಮಾಪನಗಳಲ್ಲಿ ಪರಿವರ್ತಕ ಬದಲಾವಣೆಗಳನ್ನು ತರುವ ಮೂಲಕ ಬೋಧನೆ–ಕಲಿಕೆಗಳಲ್ಲಿ ಕ್ರಾಂತಿ ಮೂಡಿಸುವ ಸಮಗ್ರ ವೇದಿಕೆಯಾಗಿದೆ. ಇದು ಅಧ್ಯಾಪಕರನ್ನು ಸಶಕ್ತಗೊಳಿಸುವ, ವಿದ್ಯಾರ್ಥಿಗಳನ್ನು ಸಮೃದ್ಧಗೊಳಿಸುವ ಮತ್ತು ಡಿಜಿಟಲ್ ಅಂತರವನ್ನು ಅಳಿಸಿಹಾಕುವ ಅತ್ಯುತ್ತಮ ವ್ಯವಸ್ಥೆಯಾಗಿದೆ. ಇದು ಎಲ್ಲರಿಗೂ ಅಪೇಕ್ಷಿತ ಸಮಯ ಮತ್ತು ಸ್ಥಳಗಳಲ್ಲಿ ಜ್ಞಾನಾರ್ಜನೆಯ ಶಕ್ತಿಯನ್ನು ನೀಡುತ್ತದೆ. ಎಲ್.ಎಂ.ಎಸ್.ಅನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳಲಾಗಿದ್ದು, ಇದನ್ನು ಯುಜಿಸಿಯ INFLIBNET Centre ಸರ್ವರ್ ಮೂಲಕ ಹೋಸ್ಟ್ ಮಾಡಲಾಗುತ್ತಿದೆ. ಹೋಸ್ಟಿಂಗ್ ಚಾರ್ಜಸ್ ಒಂದು ತಿಂಗಳಿಗೆ ರೂ. 5,000/–(+ ಜಿಎಸ್‌ಟಿ)ಗಳನ್ನು INFLIBNET Centre ಪಾವತಿಸಬೇಕಾಗಿರುತ್ತದೆ. ಈ ವಿಷಯವನ್ನು ಪ್ರಶಿಕ್ಷಣ ಪರಿಷತ್ತಿನ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| ವಿಷಯ ಸಂಖ್ಯೆ 07 | **MOOC ಕೋರ್ಸ್‌ಗಳನ್ನು ನಡೆಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವ್ಯಾಕರಣ ವಿಭಾಗವು Functional Sanskrit, Training Program on Online attendance and MCQ formation for faculty ಮತ್ತು Basic Computer Training ಸೇರಿದಂತೆ ವಿವಿಧ MOOC ಕೋರ್ಸ್‌ಗಳನ್ನು ನಡೆಸಲು ಕ್ರಮವಹಿಸುತ್ತಿದೆ. ಈ ಕೋರ್ಸ್‌ಗಳನ್ನು ಪ್ರಾರಂಭಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. ಇತರೆ ವಿಭಾಗಗಳಲ್ಲೂ ಸಹ MOOC ಕೋರ್ಸ್‌ಗಳನ್ನು ಪ್ರಾರಂಭಿಸಲು ಸಭೆಯು ಸೂಚಿಸಿತು. |
| ವಿಷಯ ಸಂಖ್ಯೆ 08 | **2021–22ನೇ ಸಾಲಿನಲ್ಲಿ ವಿವಿಧ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸುವ ಬಗೆಗೆ.** |
| ಟಿಪ್ಪಣಿ | • ಶಾಸ್ತ್ರನಿಕಾಯವು 2021–22ನೇ ಶೈಕ್ಷಣಿಕ ಸಾಲಿನಲ್ಲಿ ನಾಟ್ಯಶಾಸ್ತ್ರದ ಪಠ್ಯವನ್ನು ಕುರಿತು 'Science of Natya' |